ನಿಮ್ಮ ಕೈಯ್ಯಲ್ಲಿ ಆ ಕೆಲಸ ಆಗುವುದುಂಟಾ ಅಂತ ಕೇಳಿದ. ಅಪ್ಪಾ ನೀನು ಪಟ್ಟಣದ ಮೇಲೆ ಡಂಗೂರ ಹೊಡೆಸಿ ಯಾರು ಬೇಕಾದರೂ ಆ ವೃಕ್ಷನ ತರಬೋದು ಅಂತಂದೆ. ಪ್ರಜೆಗಳು ಮಾಡಬಹುದಾದ ಕೆಲಸನ ನಾವು ಯಾಕೆ ಮಾಡಬಾರದು. ಮಕ್ಕಳಾಗಿ ಹುಟ್ಟಿ ನಿಂದೊಂದು ಆಸೆ ಪೂರೈಸಲಿಲ್ಲ ಅಂದರೆ ರಾಜಪಿಂಡ ಅಂತ ಅನ್ನಿಸ್ಕಂಡು ನಾವು ಯಾಕೆ ಇರಬೇಕು ಅಂದರು. ಮುತ್ತಿನ ಬುಡವುಳ್ಳ ವೃಕ್ಷ ತರುವುದೇ ಸೈ ಅಂದು ರುದ್ರಗೊಮಾರ, ರೈತಗೊಮಾರರು ರೊಟ್ಟಿ, ಮೊಸರನ್ನದ ಬುತ್ತಿ ಕಟ್ಟಿಸಿಕೊಂಡು ವನಾಂತರದ ಹಾದಿಯಲ್ಲಿ ಹೊರಟುಬಿಟ್ಟರು.

★★★

ಈ ಕಡೆ ನೀಲಾವತಿ ಮಗ ಭದ್ರಗೊಮಾರನಿದ್ದು ಹೆಗಲಿಗೆ ಜೋಳಿಗೆ ತಗುಲಿಸಿಕೊಂಡು ಅಮ್ಮಾ ನಾನು ಹಳ್ಳಿ ಕಡೆ ಹೋಗಿ ಕೋರಣ್ಯಭಿಕ್ಷಾ ಮಾಡಿಕೊಂಡು ಬತ್ತೀನಿ ಅಂತ ಹೊಂಟ. ಒಂದು ಹೆಗಲ ಮೇಲೆ ಕಂಬಳಿ ಕೋರಿಗೆ, ಇನ್ನೊಂದು ಹೆಗಲಲ್ಲಿ ಜೋಳಿಗೆ, ಬಲಗೈಲಿ ದೊಣ್ಣೆ ಹಿಡಕಂಡು ಭದ್ರಗೊಮಾರ ಅತ್ತಿಂದ ಬರುತ್ತಿದ್ದ. ಇತ್ತಿಂದ ರುದ್ರಗೊಮಾರ, ರೈತಗೊಮಾರರು ಬರುತ್ತಿರುವರು. ರುದ್ರಗೊಮಾರ, ಭದ್ರಗೊಮಾರನ್ನ 'ಅಪ್ಪಾ ಕಾಡು ಮನಸಾ, ನಿನ್ನ ಹೆಸರೇನು ಅಂತ ಕೇಳಿದ. ಅದಕ್ಕೆ ಭದ್ರಗೊಮಾರ ನಾನು ಕಾಡಲ್ಲಿ ಹುಟ್ಟಿದವನು, ಕಾಡಪ್ಪ ಅಂತಲಾದರೂ ಕರೀರಿ ಸ್ವಾಮಿ. ಗಿಡದ ಮಧ್ಯೆ ಬೆಳೆದದ್ದರಿಂದ ಗಿಡಗಾರ ಅಂತಲಾದರೂ ಕರೀರಿ ಅಂದ.

ಸರಿಯಪ್ಪ ಗಿಡಗಾರ ನೀನು ಈ ಕಾಡಲ್ಲಿ ಎಲ್ಲಾದರೂ ಮುತ್ತಿನ ಬುಡ, ಚಿನ್ನದ ಗಿಡ, ಪಚ್ಚೆ ತೆನೆ ಇರುವಂಥಾ ಗಿಡ ನೋಡಿದ್ದೀಯಾ ಅಂತ ರೈತಗೊಮಾರ ಕೇಳಿದ. ಅದಕ್ಕೆ ಗಿಡಗಾರ ಸ್ವಾಮಿ, ನಾನು ಬೇರು, ಬುಡ, ಗಿಡ, ಹೂವು, ಚಿಗುರು, ಕಾಯಿ, ಹಣ್ಣು ಇರುವಂಥ ಮರ ನೋಡಿರುವೆನೇ ಶಿವಾಯಿ ನೀವು ಹೇಳಿದಂಥಾ ಗಿಡ, ಮರ ನೋಡಿಲ್ಲ ಅಂದ. ರುದ್ರಗೊಮಾರ ಅಯ್ಯೋ ನಾವು ಅದನ್ನೇ ಹುಡಿಕ್ಕಂಡು ಹೊರಟಿರೋದು. ನಮ್ಮ ತಂದೆ ಆ ಥರದ ಗಿಡನ ನೋಡಬೇಕು ಅಂತ ಭ್ರಮಿಸಿರುವರು ಅಂದಾಗ ಗಿಡಗಾರನಿದ್ದು,ಆಯ್ತು ಸ್ವಾಮಿ, ನಾನೂ ಬೇಕಾದರೆ ನಿಮ್ ಕೂಡ ಬರ್ತೀನಿ ಅಂತ ವಾಪಸು ಬಂದು ನೀಲಾವತಿಗೆ, ಅಮ್ಮಾ ಅಮ್ಮಾ ನಾನು ಹಿಂಗೆ ಹೋಗುತ್ತೀನಿ ಅಂದ. ತಾಯಿ ಇದ್ದು ನಿನಗ್ಯಾಕಪ್ಪಾ ಪಟ್ಟಣದವರ ಸಾವಾಸ, ಅವುರು ಬುದ್ಧಿವಂತ್ರು, ನೀನು ಕಾಡಲ್ಲಿ ಬೆಳೆದವನು, ನಿನ್ನ ಪಾಡಿಗೆ ನೀನು ಕೋರಣ್ಯ ಮಾಡಿಕೊಂಡು ಬರಬಾರದೇ ಅಂದಳು. ಇಲ್ಲಾ, ಇಲ್ಲ ಆ ಪಟ್ಟಣದವುರು ಏನು ಎತ್ತ ಅಂತ ನಾನು ತಿಳಕಂಬೇಕು ಕಣಮ್ಮಾ ಹೋಗಿದ್ದು ಬರವುನೇ ನಾನು ಅಂತನ್ನುವಾಗ, ಏನಾದರೂ ಆಗಲಿ ತಾತನಿಗೆ ಒಂದು ಮಾತು ಹೇಳಿ ಹೋಗಪ್ಪಾ ಅಂದಳು. ಭದ್ರಗೊಮಾರ ಜಂಗುಮೈನ ಮುಂದೆ ಬಂದು ತಾತಾ ಹಿಂಗಿಂಗೆ ನಾನು ಹೋಗಿಬತ್ತೀನಿ ಅಂದ. ಜಂಗುಮಯ್ಯ ಭದ್ರಗೊಮಾರ ನಿನ್ನ ತಾಯಿ ಹೇಳಿದ್ದು ಸರಿ, ನಾನೂ ಅದನ್ನೇ ಹೇಳ್ತೀನಿ. ಪಟ್ಟಣದ ಜನ ಬುದ್ಧಿವಂತರು. ತಲೆಮಂಡೆಯಲ್ಲಿ ಮಾತ್ರವಲ್ಲ. ರೋಮ ರೋಮಕ್ಕೂ ಅವರದು ಬಲು ಯುಕ್ತಿ. ಎಚ್ಚರಿಕೆಯಿಂದ ಹೋಗಿ ಎಚ್ಚರಿಕೆಯಿಂದ ಬಾರಪ್ಪ ಅಂತೇಳಿದ. ಆಗ ಹುಡುಗನಿದ್ದು ತಾತ ನೀವೇ ನಂಗೆ ಸಾಮುಶಕ್ತಿ, ವಿದ್ಯಾಬುದ್ಧಿ ಎಲ್ಲಾ ಕಲಿಸಿದ್ದೀರಿ, ನಂಗೇನು ಭಯ ಎಂದು ಹಿಟ್ಟಿನಬುತ್ತಿ ಕಟ್ಟಿಸಿಕೊಂಡು ಹೊಂಟುಬಂದ.

ಮುಂದೆ ಮುಂದೆ ಭದ್ರಗೊಮಾರ. ಹಿಂದಿಂದೆ ರುದ್ರಗೊಮಾರ, ರೈತಗೊಮಾರರು. ಅಡವಿ ಅರಣ್ಯ ಘೋರಾರಣ್ಯವಾಗುತ್ತಲೂ ಅವಳಿ ಜವಳಿ ರಾಜನ ಮಕ್ಕಳು ಗಡಗಡ ನಡುಗುತಾವರೇ. ಎಲ್ಲಿ ಹೆಬ್ಬುಲಿ ಪಾಲಾದೇವ್ರೋ, ಯಾವ ಆನೆ ಬಂದು ತುಳಿತದೋ ಅಂದು ಪತರಗುಟ್ಟುತವ್ರೆ. ಬರುತ್ತ ಬರುತ್ತ ಅಲ್ಲೊಂದು ಹುತ್ತದ ಕೋಮೆ. ಅದರೊಳಗೊಂದು ಸರ್ಪ. ಅದರ